ಮೂಲ ದಾವಾ ನಂಃ 24/2019

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **06.12.2025.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಿಪಿ.4 ದಾವಾಸ್ತಿಯನ್ನು ನಮ್ಮ ತಂದೆ ಖರೀದಿ ದಿಮಾಡಿದ ಬಗ್ಗೆ ಖರೀದಿ ಪತ್ರವಾಗಿರುತ್ತದೆ. ನಿಪಿ.4 ರಲ್ಲಿ ದಾವಾ ಆಸ್ತಿ ಪೂರ್ವ ಪಶ್ಚಿಮವಾಗಿ ಮತ್ತು ದಕ್ಷೀಣ ಉತ್ತರವಾಗಿ ಎಷ್ಟು ಉದ್ದ ಅಗಲವಿದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ದಾವಾಸ್ತಿಯ ವರ್ಣನೆಯಲ್ಲಿ ಪೂರ್ವ ಪಶ್ಚಿಮವಾಗಿ 67 ಇದೆ ಎಂದು ಕಾಣಿಸಿದ್ದೇನೆ ಅಂದರೇ 67 ಜಾಗದ ಅಗಲ ಮತ್ತು 7 ಫೂಟ್ ಕೊಟ್ಟಿಗೆಗೆ ಹೋಗುವ ಜಾಗ ಎಂದು ನುಡಿಯುತ್ತಾರೆ. ನಿಪಿ.4 ರಲ್ಲಿ ದಾವಾಸ್ತಿಯೂ ಪೂರ್ವ ಪಶ್ಚಿಮವಾಗಿ 60 ಫೂಟ್ ಇದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮಂದುವರೆದು, 7 ಫೂಟ್ ಗಾಂವಟಾನಾ ಜಾಗೆ ಆಗಿರುವುದರಿಂದ, ಅದನ್ನು ನಮೂದು ಮಾಡಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಕಾಣಿಸಿದ ದಾವಾಸ್ತಿಯ ವರ್ಣನೆಯಲ್ಲಿ ಪೂರ್ವ ಪಶ್ಚಿಮವಾಗಿ 67 ಅಡಿ ಇದೆ ಎಂದು ಕಾಣಿಸಲಾಗಿದೆ ಎಂದರೆ ಸರಿ. ನಿಪಿ.4 ರಲ್ಲಿ 60 ಫೂಟ್ ಇದ್ದದ್ದನ್ನು ನಾನು 67 ಫೂಟ್ ಎಂದು ಕಾಣಿಸಿರುತ್ತೇನೆ ಎಂದರೆ ಸರಿ, ಜಾಗ ಮತ್ತು ದಾರಿಯನ್ನು ಸೇರಿ ಕಾಣಿಸಿರುತ್ತೇನೆ ಎಂದು ನುಡಿಯುತ್ತಾರೆ. ಯಾವುದಾದರೂ ಆಸ್ತಿಯನ್ನು ಖರೀದಿ ಮಾಡಿದಾಗ, ಅದರ ಉದ್ದ ಅಗಲ ಅಳತೆಯನ್ನು ತೋರಿಸಿರುತ್ತಾರೆ ಎಂದರೆ ಸರಿ.ವಾದ ಪತ್ರದೊಂದಿಗೆ ಲಗತ್ತಿಸಿದ ಹಾತ್ ನಕಾಶೆಯಲ್ಲಿ 67 ಅಡಿ ಎಂದು ತೋರಿಸಲಾಗಿದೆ ಎಂದರೆ ಸರಿ. ನನಗೆ ಬೇಕಾದ ರೀತಿಯಲ್ಲಿ ಹಾತ್ ನಕಾಶೆಯನ್ನು ತಯಾರಿಸಿಕೊಂಡು , ವಾದ ಪತ್ರದೊಂದಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸುಳ್ಳು. ಹಾತ್ ನಕಾಶೆಯಲ್ಲಿ ಪೂರ್ವ ಪಶ್ಚಿಮವಾಗಿ 60 ಅಡಿ ಅಗಲ ಮತ್ತು ದಾರಿ 7 ಅಡಿ ಎಂದು ಕಾಣಿಸಬಹುದಿತ್ತು ಎಂದರೆ ಸರಿ. ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಮತ್ತು ಸಂಗತಿಯನ್ನು ಮರೆಮಾಚುವ ಉದ್ದೇಶದಿಂದಿ 60+7 ಎಂದು ನಿಖರವಾಗಿ ಕಾಣಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.4 ರಲ್ಲಿ ನಿಖರವಾಗಿ , 60 ಅಡಿ ಎಂದು ನಮೂದಿದ್ದರೂ ಸಹಿತ, ನಾನು ಅದನ್ನು ಹಾತ್ ನಕಾಶೆಯಲ್ಲಿ ತೋರಿಸಿದ್ದು ಇರುವುದಿಲ್ಲ ಎಂದರೆ, ಸಾಕ್ಷಿಯು ನನ್ನ ಮನೆಯ ಹಿತ್ತಲ್ಲಕ್ಕೆ ಹೋಗಲು ಅದೇ ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಕರಾರು ಪತ್ರವನ್ನು ದಿನಾಂಕಃ14.01.2019 ರಂದು ಮಾಡಿಕೊಂಡಿದ್ದೇವು. ಏನೆಂದು ಕರಾರು ಮಾಡಿಕೊಂಡಿರುತ್ತೀರಿ ಎಂದರೆ, ಸಾಕ್ಷಿಯು ಎರಡು ಆಸ್ತಿಗಳನ್ನು ಅಳತೆ ಮಾಡಿ, ಸೆಂಟರ್ ಪಾಯಿಂಟ್ ನ್ನು ಗುರುತಿಸಿ, ದಾರವನ್ನು ಕಟ್ಟಿ , ಅಲ್ಲಿ ಬೇಲಿ ಹಾಕಿಕೊಳ್ಳುವಂತೆ, ಕರಾರನ್ನು ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಕರಾರಿನಂತೆ ನಾನು ನಡೆದುಕೊಂಡಿದ್ದು ಇರುವುದಿಲ್ಲ ಎಂದರೆ ಸುಳ್ಳು. ಚಿದಾನಂದ ಹರಿಜನ ಯಾರು ಎಂದರೆ, ನನಗೆ ಗೊತ್ತಿಲ್ಲ. ಪ್ರತಿವಾದಿಯರ ಕಡೆಯಿಂದ ಅವರು ಬಂದಿದ್ದರು. ಅವರು ನಮ್ಮ ಮನೆಗೆ ಸಮಸ್ಯ ಬಗೆಹರಿಸುವುದಾಗಿ ಹೇಳಿಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಸದರಿ ಕಾರಾರು ಪತ್ರದಲ್ಲಿ ಜಮೀನಿನ ಬಗ್ಗೆ ನಮೂದಾಗಿತ್ತು. ಸದರಿ ಕರಾರಿನಲ್ಲಿ ಜಮೀನಿನ ವಿಷಯವಾಗಿ ನಾವು ಅವರಿಗೆ ದುಡ್ಡನ್ನು ಕೊಡುವ ಬಗ್ಗೆ ಯಾವುದೇ ಶರತ್ ಇರಲಿಲ್ಲ.

ಈ ದಾವೆಯಲ್ಲಿ ನಾನು ಏನೆಂದು ಮಾಗಣಿ ಕೇಳಿರುತ್ತೇನೆ ಎಂದರೆ, ಸಾಕ್ಷಿಯು ಪ್ರತಿವಾದಿಯರಾಗಲೀ ಅವರ ಜನರಾಗಲೀ ನಮಗೆ ದಾವಾಸ್ತಿಗೆ ಸಂಬಂಧಿಸಿದಂತೆ ತೊಂದರೆ ಕೊಡಬಾರದೆಂದು ಮತ್ತು ಮಧ್ಯದ ರೇಖೆ ಗುರುತಿಸಿದ್ದು, ಅಲ್ಲಿ ಕಂಪೌಂಡ್ ಗೋಡೆ ನಿರ್ಮಿಸಲು ನಮಗೆ ಅವರು ತೊಂದರೆ ಕೊಡಬಾರದೆಂದು ಮಾಗಣಿಯನ್ನು ಕೇಳಿರುತ್ತೇವೆ .ದಿನಾಂಕಃ 14.01.2019 ರ ಕರಾರಿನಂತೆ ನಾನು ಪ್ರತಿವಾದಿಯರೊಂದಿಗೆ ನಡೆದುಕೊಂಡಿದ್ದು

ಇರುವುದಿಲ್ಲ ಎಂದರೆ ಸುಳ್ಳು. ದಿನಾಂಕಃ 14.01.2019 ರ ರಾಜಿ ಕರಾರು ಪತ್ರದಲ್ಲಿ ಕಂಪೌಂಡ ಹಾಕುವ ಬಗ್ಗೆ ನಮೂದಿದೆಯೇ ಎಂದರೆ, ಸಾಕ್ಷಿಯು ನನಗೆ ನೆನಪಿಲ್ಲ, ಆದರೆ ಬೇಲಿ ಬಗ್ಗೆ ನಮೂದಿದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ನಿಪಿ.9 ನ್ನು ತೋರಿಸಿ ಕೇಳಲಾಗಿ ಅದರಲ್ಲಿ ಚಿದಾನಂದ ಹರಿಜನ ಮತ್ತು ಇತರೇ ಹಿರಿಯರ ಸಮಕ್ಷಮ ಕಂಪೌಂಡ್ ಗೋಡೆ ನಿರ್ಮಿಸತಕ್ಕದ್ದು ಎನ್ನುವ ಶರತ್ ಇದೆಯೇ ಎಂದರೆ, ಸಾಕ್ಷಿಯು ನಿಪಿ.9 ನ್ನು ಓದಿ ನೋಡಿ ಅದರ 3 ನೇ ಪುಟದಲ್ಲಿದೆ ಎಂದು ನುಡಿಯುತ್ತಾರೆ. ನಿಪಿ.9 ರಲ್ಲಿ ಕಂಪೌಂಡ್+ಗೋಡೆ ನಿರ್ಮಿಸತಕ್ಕದ್ದು ಎನ್ನುವ ಶರತ್ ಇದೆಯೇ ಎಂದರೆ ಇಲ್ಲ. ಬೇಲಿ ಎಂದು ನಮೂದಿದೆ ಎಂದು ನುಡಿಯುತ್ತಾರೆ. ನಾನು ನಿಪಿ.9 ನ್ನು ಉಲಂಘನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.9 ರಲ್ಲಿ ನಮೂದಿಸಿದ 1 ನೇ ಶರತ್ತಿನ ಪ್ರಕಾರ ನಡೆದುಕೊಳ್ಳದೇ ಕಂಪೌಂಡ್ ಗೋಡೆಯನ್ನು ಕಟ್ಟಿಯೇ ತೀರುತ್ತೇವೆಂದು ನಾವು ಪ್ರತಿವಾದಿಯೊಂದಿಗೆ ಜಗಳ ಮಾಡುತ್ತಾ ಬಂದಿರುತ್ತೇವೆ ಎಂದರೆ ಎಲ್ಲಾ ಸುಳ್ಳು. ಒಂದುವೇಳೆ ನಾವು ನಿಪಿ.9 ರ ಪ್ರಕಾರ ನಡೆದುಕೊಂಡಿದ್ದೇ ಆದ್ದಲ್ಲಿ, ವಾದಪತ್ರದಲ್ಲಿ ಕೇಳಿದ ಮಾಗಣಿಯಲ್ಲಿ ಬೇಲಿ ಎಂದು ಮಾತ್ರ ಕಾಣಿಸುತ್ತಿದ್ದೆ , ಕಂಪೌಂಡ್ ಗೋಡೆ ಎಂದು ಕಾಣಿಸುತ್ತಿರಲಿಲ್ಲ ಎಂದರೆ, ಸಾಕ್ಷಿಯು ನಾನು ಕರಾರು ಪ್ರಕಾರವೇ ನಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಚಿದಾನಂದ ಹರಿಜನ ಮತ್ತು ಉಳಿದ ಪ್ರಮುಖರು ಸದರಿ ಕರಾರು ಪತ್ರದಂತೆ ನಡೆದುಕೊಳ್ಳುವಂತೆ ನಮಗೆ ಬುದ್ಧಿ ವಾದ ಹೇಳಿದ್ದರೂ ಎಂದರೆ, ಸಾಕ್ಷಿಯು ಸದರಿ ಚಿದಾನಂದ ಹರಿಜನ ಮತ್ತು ರಮೇಶರವರೇ 3 ಜನ ಕೆಲಸದವರನ್ನು ಕರಿಸಿ, ಗೂಟ ನೆಟ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. ಬೇಲಿ ಹಾಕಿಕೊಳ್ಳುವ ಬದಲಿಗೆ ನಾವು ಕಂಪೌಂಡ್ ಗೋಡೆ ನಿರ್ಮಿಸಲು ಮುಂದಾದಾಗ, ಪ್ರತಿವಾದಿಯರು ಸೌಜನ್ಯದಿಂದ ನಿಪಿ.9 ರ ಪ್ರಕಾರ ಬೇಲಿಯನ್ನು ಮಾತ್ರ ಹಾಕಿಕೊಳ್ಳಿ ಎಂದು ಹೇಳಿದರು ಎಂದರೆ , ಆ ರೀತಿ ಘಟನೆಯೇ ನಡೆದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಪ್ರತಿವಾದಿಯರು ಸೌಜನ್ಯದಿಂದ ಹೇಳಲು ಬಂದಾಗ, ನಾನು ಅವರ ಮೇಲೆ ದೌರ್ಜನ್ಯ ಎಸಗಿರುತ್ತೇನೆ ಎಂದರೆ, ಸಾಕ್ಷಿಯು ಅವರು ಹೇಳಲು ಬಂದಿದ್ದು ಇರುವುದಿಲ್ಲ, ನಾನು ದೌರ್ಜನ್ಯ ಎಸಗಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.9 ರಲ್ಲಿ ಕಂಪೌಂಡ್ ಗೋಡೆ ನಿರ್ಮಿಸಿಕೊಳ್ಳುತ್ತೇವೆ ಎಂದು ನಮೂದು ಮಾಡಲು ತೊಂದರೆ ಇತ್ತೆ ಎಂದರೆ, ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ನಾನು ಅವರ ವಿರುದ್ಧ ಈ ರೀತಿ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ, ಸಾಕ್ಷಿಯ ಅವರಿಗೆ ಮೋಸ ಮಾಡಬೇಕೆಂಬ ಉದ್ದೇಶ ನನಗೆ ಇಲ್ಲ ಎಂದು ನುಡಿಯುತ್ತಾರೆ. ಅವರಿಗೆ ಭಯ ಹುಟ್ಟಿಸಬೇಕೆಂಬ ಉದ್ದೇಶದಿಂದ ಈ ಸುಳ್ಳು ಸಿವಿಲ್ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸುಳ್ಳು. ಈ ದಾವೆಯನ್ನು ದಾಖಲಿಸಲು ದಾವಾ ಕಾರಣ ನನಗೆ ಬಹಳಷ್ಟು ಸಾರಿ ಉದ್ಭವಿಸಿದೆ. ಸುಮಾರು 6 ವರ್ಷದಿಂದ ನಡೆಯುತ್ತಿದ್ದು, ನಾವು ಸಹಿಸಿಕೊಂಡು ಬಂದಿದ್ದೇವೆ. 2019 ನೇ ಸಾಲಿನ ನಂತರ ಇವೆಲ್ಲವೂ ಆಗಿರುತ್ತದೆ. ಸಾಕ್ಷಿ ಮುಂದುವರೆದು, ನಾವು 2018 ರಲ್ಲಿ ಬಂದಿರುತ್ತೇವೆಂದು ನುಡಿಯುತ್ತಾರೆ. ಯಾವ ದಿನಾಂಕದಂದು ದಾವಾ ಕಾರಣ ಉದ್ಭವಿಸಿರುತ್ತದೆ ಎಂದರೆ, ಸಾಕ್ಷಿಯು ದಿನಾಂಕಃ 18.01.2019 ರಂದು ಚಿದಾನಂದರವರು ಬೇಲಿಯ ಗೂಟ ಹಾಕಿಸಿದ ದಿನದಿಂದಲೇ ಶುರುವಾಗಿರುತ್ತದೆ, ಪ್ರತಿವಾದಿಯರು ಸದರಿ ಗೂಟವನ್ನು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಮೇ 5 ಮತ್ತು 6 ನೇ ತಾರೀಖಿನಿಂದ ಇಲ್ಲಿಯವರೆಗೂ ಚಾಲ್ತಿಯಲ್ಲಿದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲು ಮಾಡಲು ನನಗೆ ನಿಖರವಾದ ದಾವಾ ಕಾರಣ ಇಲ್ಲ ಎಂದರೆ ಸರಿ. ನಾನು ಹೇಳಿದಂತೆ ಪ್ರತಿವಾದಿಯರು ನಡೆದುಕೊಳ್ಳದೇ ಇದ್ದರೂ ಸಹಿತ, ಅವರ ವಿರುದ್ಧ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ದಾಖಲಿಸಿದ ನಂತರ, ಪ್ರತಿವಾದಿಯರು ಹೆದರದೇ ಇದ್ದ ಕಾರಣ, ಅವರ ವಿರುದ್ಧ 2019 ನೇ ಸಾಲಿನಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ , ಅವರ ಪೈಪ್ ಒಡೆದಿದ್ದರಿಂದ, ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಗಂಡ ಪ್ರತಿದಿನ ಪೋಲೀಸ್ ಠಾಣೆಗೆ ಹೋಗುತ್ತಿದ್ದೇವು ಎಂದರೆ, ಸಾಕ್ಷಿ ನಮ್ಮ ಮೇಲೆ ದೌರ್ಜನ್ಯ ನಡೆಯುತ್ತಿತ್ತು, ಪೋಲೀಸ್ ಠಾಣೆ ಬಿಟ್ಟರೇ ಬೇರೆ ದಾರಿ ಇಲ್ಲದೇ ಇದ್ದ ಕಾರಣ,

ಹೋಗುತ್ತಿದ್ದೇವು ಎಂದು ನುಡಿಯುತ್ತಾರೆ. ನಿಪಿ.9 ರ ಪ್ರಕಾರ ಪ್ರತಿವಾದಿಯರು ನಡೆದುಕೊಂಡಿರುವುದಿಲ್ಲ ಮತ್ತು ಕಂಪೌಂಡ್ ಗೋಡೆ ಕಟ್ಟಲು ಕೊಡುತ್ತಿಲ್ಲವೆಂದು ನಾವು ಪೋಲಿಸ್ ಠಾಣೆಗೆ ಹೋಗಿರುತ್ತೇವೆ ಎಂದರೆ ಹೌದು. ಆಗ ಪೋಲಿಸರು ಕಂಪೌಂಡ್ ಗೋಡೆ ನಿರ್ಮಿಸುವ ಬಗ್ಗೆ ನಿಖರವಾದ ಶರತ್ ಇಲ್ಲ ಎಂದು ಪೋಲಿಸರು ನಮಗೆ ಹೇಳಿದ್ದರು ಎಂದರೆ ಇಲ್ಲ. ಆದ ಕಾರಣ ನಮ್ಮ ದೂರನ್ನು ದಾಖಲು ಮಾಡಿಕೊಳ್ಳದೇ ನಮಗೆ ಹಿಂಬರಹ ನೀಡಿರುತ್ತಾರೆ ಎಂದರೆ, ಸಿವಿಲ್ ಸ್ವರೂಪದ್ದಾಗಿರುತ್ತದೆ ಎಂದು ನೀಡಿರುತ್ತಾರೆ. ಪ್ರತಿವಾದಿಯರು ನಮಗೆ ಯಾವುದೇ ರೀತಿಯ ತೊಂದರೆ ಕೊಡದೇ ಇದಿದ್ದರಿಂದ, ಪೋಲಿಸರು ಈ ರೀತಿ ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ 18.01.2019 ರಂದು ಪ್ರತಿವಾದಿಯರ ವಿರುದ್ಧ ದೂರನ್ನು ದಾಖಲು ಮಾಡಲು ನಾವು ಠಾಣೆಗೆ ಹೋಗಿದ್ದೇವು ಎಂದರೆ, ಅವರು ಒಡೆದು ಹಾಕಿದ್ದ ಕಾರಣ, ದಾಖಲು ಮಾಡಲು ಹೋಗಿದ್ದೇವು ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಅವರು ಒಡೆದು ಹಾಕಿದ್ದಲ್ಲಿ, ಪೋಲಿಸರು ದೂರನ್ನು ದಾಖಲು ಮಾಡಿಕೊಳ್ಳುತ್ತಿದ್ದರು ಎಂದರೆ ಹೌದು. ಈ ರೀತಿ ಹಿಂಬರಹ ಕೊಟ್ಟಿದ್ದರಿಂದ, ಪ್ರತಿವಾದಿಯರ ವಿರುದ್ಧ ಈ ಸಿವಿಲ್ ಸ್ವರೂಪದ ದಾವೆ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**